ಶ್ರೀ ಎಸ್. ನಿಜಲಿಂಗಪ್ಪ.—ಆ ಹತ್ತಿ ಬೆಳೆಯುತಕ್ಕ ಪ್ರದೇಶದಲ್ಲಿರತಕ್ಕ ಜನರು ನನಗೆ ಒಂದು ಮನವಿಯನ್ನು ಕೂಡ ಅರ್ಪಿಸಿದ್ದಾರೆ. ಇದರಿಂದ ಹೆಚ್ಚಿನ ಹತ್ತಿಯನ್ನು ಬೆಳೆಯುತಕ್ಕ ಜನರಿಗೆ ಬಹಳ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಇದನ್ನು ಮಾಡಿದ್ದರೆ ಇಲ್ಲಿ ಹತ್ತಿ ಬೆಳೆಯತಕ್ಕ ರೈತರಿಗೆ ಬಹಳ ತೊಂದರೆಯಾಗುತ್ತದೆಂದು ನಾನು ಈಗಾಗಲೇ ಕೇಂದ್ರ ಸರ್ಕಾರದವರಿಗೆ ಪತ್ರ ಕೂಡ ಬರೆದಿದ್ದೇನೆ. ನಾನು ಪುನಃ ದೆಹಳಿಗೆ ಹೋದಾಗ ಇದನ್ನು ವಿಚಾರ ಮಾಡುತ್ತೇನೆ. ಇದನ್ನು ಕೂಡಲೆ ಮಾಡಬೇಕೆಂದು ಅವರನ್ನು ನಾನು ಒತ್ತಾಯಮಾಡುತ್ತೇನೆಂದು ತಿಳಿಸುವುವಕ್ಕೆ ಇಚ್ಛಿಸುತ್ತೇನೆ.

Mr. SPEAKER.—The question is:

"That this House hereby approves the Notifications proposed to be issued by the State Government under section 3 of the Cotton Transport Act, 1923 (Central Act 3 of 1923), the drafts of which have been laid before this House on the 16th March, 1967".

The Resolution was adopted.

MYSORE APPROPRIATION No. 3 BILL 1967.

(*Introduction*)

Mr. SPEAKER.—I have to inform the House that I have received a message from the Governor recommending that the Mysore Appropriation (No. 3) Bill, 1967, be considered by the Mysore Legislative Assembly.

Sri H. R. ABDUL GAFFAR (Deputy Minister for Finance).—Sir, I beg to introduce the Mysore Appropration (No. 3) Bill 1967.

Mr. SPEAKER.—The Mysore Appropriation (No. 3) Bill, 1967 introduced.

MYSORE APPROPRIATION (No. 3) BILL, 1967.

Motion to consider

Sri H. R. ABDUL GAFFAR.—Sir, the demands that are adumbrated here have been fully discussed by this House for one full day.

Sir, I beg to move:

"That the Mysore Appropriation (No. 3) Bill, 1967 be taken into consideration."

Mr. SPEAKER.—Motion moved:

"That the Mysore Appropriation (No. 3) Bill, 1967 be taken into consideration."

Sri H. SIDDAVEERAPPA.—Sir, I oppose this Bill, though of course, it has been sufficiently discussed as pointed out by the Hon'ble Deputy Finance Minister.....

Mr. SPEAKER.—Demands have been discussed, but the Bill has not been discussed.

Sri H. SIDDAVEERAPPA.—What is now sought to be approved is the grant of a sum of nearly Rs. 3,47,84,026.

I would like to know whether the Government are justified in bringing this additional supplementary demands within two or three days after after passing the original Appropriation Bill. I cannot understand if it is a new item of expenditure which had been contemplated as new item of service. Even then my submission is there was no need to bring this supplementary demand at all. Even during the course of the year when the legislature is not in session, if the Government were to feel that there is need for new item of expendlture, they can introduce it and bring it by way of suplementary demand later on. Now what has happened ? Every item has been included in the Bill—*i.e.* General Administration, Agriculture, Co-operation, Industries etc., we have sanctioned sufficient funds and I do not know whether this Government will be able to spend the money within the allotted time that too to spend it usefully for the items the amount is meant for. When that is the position, the Government has come forward to seek the approval of this House for additional sum of Rs. 3.47 crores. Sir, this Government is preaching economy and in this regard they issued a Government Order No. FD 52/67 dated 11th July 1957. In this order they show us in the index given to it that they want to save a sum of Rs. 3,14,74,815 by effecting economy with a view to have a balanced budget. This is the kind of economy they are doing after the budget is prepared. I do not know why the Budget is prepared like that. This shows the Government know nothing. As Mr. Channabasappa puts it this Government is run by whims and fancies. I feel the Minister for Finance who is really the custodian of the purse of the country should be very careful and see that this kind of Bill is not allowed to come. He should exercise his full control over the expenditure. This supplementary demand has come after the original bill is passed about 4 days back. How many changes or vicissitudes this budget has gone through ? Formerly one supplementary budget demand was placed before us before the budget was introduced. They took four months to spend that amount sanctioned *i.e.*, up to July 1967. Then they said they will call for a session in the month of May. They called for a session—marathoon session, which created a precident here. In that session the Government was humbled if I can say so. "We do not know the amount the Government of India is giving". Our Chief Minister said, "we are going to do that or that". The Central Government has given already 2 crores of rupees more than wat was proposed. We have already considered and passed a budget for full one year. Still they have come forward with this supplementary demand. I feel the Government

could exercise some economy measures and save some money. If they could do so there will be no need for this supplementary demand. There is no necessity to bring this supplementary demand and also this Appropriation Bill. Therefore I oppose and say that this Bill should not be passed.

Mr. SPEAKER.—The demands have been passed.

Sri H. SIDDAVEERAPPA.—I apologise to you because I was not present when the demands were passed.

ಶ್ರೀ ಸಿದ್ಧಯ್ಯ ಕಾಶೀಮಠ (ಶಿರಹಟ್ಟಿ).—ಸ್ವಾಮಿ, ಸರಕಾರದವರು ನಮಾರು ಮೂರು ಕೋಟಿ ನಲವತ್ತೇಳು ಲಕ್ಷದಷ್ಟು ಹಣ ಬೇಕೆಂದು ಈ ಅಪ್ರೊಪ್ರಿಯೇಷನ್ ಬಿಲ್ಲಿನಲ್ಲಿ ತಂದಿದ್ದಾರೆ. ಇದರ ಬಗ್ಗೆ ನಾನು ಮುಖ್ಯವಾಗಿ ಹೇಳಬೇಕಾಗಿರುವುದು ಅಗ್ರಿಕಲ್‌ಚರ್ ಹಾಗೂ ಇಂಡಸ್ಟ್ರಿಬಗ್ಗೆ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ. ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂದಿರುವ ಈಗಿನ ಸನ್ನಿವೇಶದಲ್ಲಿ ರೈತರಿಗೆ ಸಾಕಷ್ಟು ಮೆನ್ಯೂರ್ಸ್ ಎಂದರೆ ಫರ್ಟಿಲೈಸರು ಗಳನ್ನು ಅವರು ಬೇಡಿದರೂ ಅದು ಸರಿಯಾಗಿ ಸಿಕ್ಕುತ್ತಿಲ್ಲ ; ಮತ್ತು ರಾಸಾಯನಿಕ ಗೊಬ್ಬರವಿಲ್ಲದೆ ಪೀಕುಗಳೆಲ್ಲಾ ನಾಶವಾಗುತ್ತಾ ಹೋಗುತ್ತಿವೆ ಮತ್ತು ಸರಿಯಾದ ಪೀಕು ಬರುವುದೂ ದೂರದೇ ಹೋಗುತ್ತವೆ. ಆದುದರಿಂದ ರಾಸಾಯನಿಕ ಗೊಬ್ಬರವನ್ನು ಸರಿಯಾದ ರೀತಿಯಲ್ಲಿ ಹಂಚಲು ಆಯಾ ತಾಲ್ಲೂಕಾ ಹೆಡ್‌ಕ್ವಾರ್ಟರುಗಳಲ್ಲಿಯೇ ಎಲ್ಲರಿಗೂ ಸುಲಭವಾಗಿ ಸಿಗುವಂತೆ ತಕ್ಕ ಕಾರ್ಯ ಕ್ರಮ ಹಾಕಿಕೊಂಡು ಅದನ್ನು ಪುರವಚೆ ಮಾಡಬೇಕೆಂದು ಇಲ್ಲಿ ಸಲಹೆ ಮಾಡುತ್ತೇನೆ ಮತ್ತು ಇದರಿಂದ ಹೆಚ್ಚು ಉತ್ಪಾದನೆ ಮಾಡಲು ಕೂಡ ಅವಕಾಶವಾಗುತ್ತದೆ.

ಇನ್ನು ಇಂಡಸ್ಟ್ರಿಗಳ ಬಗ್ಗೆ ನೋಡಿದರೆ ನಿರುದ್ಯೋಗಿಗಳ ಸಂಖ್ಯೆಯೇ ಹೆಚ್ಚುತ್ತಿದೆ. ಹೆಚ್ಚಿಗೆ ಇಂಡಸ್ಟ್ರಿಗಳಾದರೂ ಅವನ್ನು ಸರಿಯಾದ ರೀತಿಯಲ್ಲಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ನಡೆಸುವಂತೆ ಮಾಡಿದರೆ ಉದ್ಯೋಗವಿಲ್ಲದ ಜನಗಳಿಗೆ ಕೆಲಸಗಳು ಸಿಕ್ಕಿ ನ್ಯಲ್ಪಮಟ್ಟಿಗಾದರೂ ನಿರುದ್ಯೋಗಿಗಳ ಸಂಖ್ಯೆ ಕಡಿಮೆ ಮಾಡಲು ಅವಕಾಶವಾಗುತ್ತದೆ. ಇಷ್ಟೇ ಅಲ್ಲ ಕೆಲವೊಂದು ಇಂಡಸ್ಟ್ರಿಗಳಿಗಾಗಿ ಲೈಸನ್ಸ್‌ಗಳನ್ನು ಕೊಟ್ಟಿದ್ದರೂ ಕೂಡ ಇವೊತ್ತಿನವರೆಗೂ ಅವು ಏನು ಕಾರ್ಯಗಳನ್ನು ಮಾಡುತ್ತಿವೆ ಎನ್ನುವುದು ನಮಗೆ ಸರಿಯಾಗಿ ಕಾಣುತ್ತಿಲ್ಲ. ಈಗಾಗಲೇ ನಮಗೆ ಗೊತ್ತಿರುವಂತೆ ಸಿಮೆಂಟಿನ ಕಂಟ್ರೋಲನ್ನು ತೆಗೆದರು. ಆದರೆ ಈಗ ಹಳ್ಳಿಗಳವರಿಗೆ ಹಾಗೂ ತಾಲ್ಲೂಕುಗಳಲ್ಲಿರುವ ಜನಕ್ಕೆ ಸರಿಯಾಗಿ ಸಿಮೆಂಟು ಸಿಗುತ್ತಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಇವೊತ್ತು ಫ್ಯಾಕ್ಟರಿಗಳು ಆಗುವುದು ಬಹಳ ಪ್ರಾಮುಖ್ಯವಾದುದು ; ಆದರೆ ಅದರ ಮೂಲಕ ಒಂದು ನಿಗದಿಯಾದ ಬೆಲೆಯಲ್ಲಿ ಸಕಾಲದಲ್ಲಿ ಜನಗಳಿಗೆ ಸಿಮೆಂಟು ದೊರೆಯುವ ವ್ಯವಸ್ಥೆ ಮಾಡಬೇಕು. ನಾನು ಹಿಂದೆ ಇಲ್ಲೇ ನಗರಕಾಳಿ ಸಿಮೆಂಟು ಫ್ಯಾಕ್ಟರಿ ಬಗ್ಗೆ ಸರಕಾರದ ಗಮನಕ್ಕೂ ತಂದೆ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೂ ತಂದೆ. ಅದಕ್ಕೆ ಲೈಸನ್ಸ್ ಕೊಟ್ಟು ನಮಾರು ಆರು ವರ್ಷಗಳಾದರೂ ಕೂಡ ಇದರೊಳಗೆ ಏನು ನಡೆಯುತ್ತಿದೆ ಮತ್ತು ಯಾವ ಸ್ಟೇಜಿನಲ್ಲಿದೆ ಎನ್ನುವುದನ್ನು ಇದುವರೆಗೂ ಸರಕಾರ ಹೇಳಲಿಲ್ಲ. ಸರಕಾರದವರು ಇದರ ಬಗ್ಗೆ ವಿಚಾರ ಮಾಡಿ ಇಂತಹ ದೊಡ್ಡ ಫ್ಯಾಕ್ಟರಿಗಳಿಗಿರುವ ಕುಂದುಕೊರತೆ ಗಳೇನು ಎನ್ನುವುದನ್ನು ಹೇಳಿ ಅದನ್ನು ಪರಿಹರಿಸಲು ಪ್ರಯತ್ನ ಮಾಡಬೇಕು. ಇಲ್ಲವಾದರೆ ಇದನ್ನು ಬೇರೆಯವರಿಗಾದರೂ ವಹಿಸಿಕೊಡಬಹುದು. ಮತ್ತೆ ಸಣ್ಣ ಕೈಗಾರಿಕೆಗಳಿಗೆ ಸರಕಾರ ಇನ್ನೂ ಹೆಚ್ಚು ಉತ್ತೇಜನ ಕೊಡಬೇಕು ಎಂದೂ ನಾನು ಸಲಹೆ ಮಾಡುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ನಾನು ಈ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಮಸೂದೆಯನ್ನು ವಿರೋಧಿಸುತ್ತಾ ವಿದ್ಯುಚ್ಛಕ್ತಿ ಬೋರ್ಡಿನ ಬಗ್ಗೆ ಹೇಳಬೇಕಾಗಿದೆ. ಈ ಬೋರ್ಡಿಗೆ ಹೊಸದಾಗಿ ಒಬ್ಬರು ಅಧ್ಯಕ್ಷರನ್ನು ಸರಕಾರದವರು ನೇಮಕ ಮಾಡಿದ್ದಾರೆ ಮತ್ತು ಇದು ತಾತ್ಕಾಲಿಕವಾಗಿ ಮಾಡಿದೆ ಎಂದು ಹೇಳಿದ್ದಾರೆ. ಆದರೆ ವಿದ್ಯುಚ್ಛಕ್ತಿ ಬೋರ್ಡಿಗೆ ಸಂಬಂಧಪಟ್ಟ ಹಾಗೆ ಒಂದು ಆಕ್ಟ್ ಇದೆ. ಅದರಂತೆ ಇದು ಹೇಗೆ ನಡೆಯಬೇಕು ಯಾವ ನೀತಿಯನ್ನು ಅನುಸರಿಸಬೇಕು ಎನ್ನುವುದೆಲ್ಲಾ ಅದರಲ್ಲಿದೆ. ಹಿಂದೆ ಒಂದು ಸಿಲ್ಕ್ ಬೋರ್ಡಿನಲ್ಲಿದ್ದವರನ್ನು ಇಲ್ಲಿಗೆ ನೇಮಕ ಮಾಡಿದಾಗ ಹಾಗೆ ಮಾಡಿದ್ದು ತಪ್ಪು ಎಂದು ನಾವು ವಿರೋಧ ಮಾಡಿದುದು ತಮಗೂ ನೆನಪು ಇರಬಹುದು. ಬ್ಯಾಂಕ್‌ನಲ್ಲಿ ಕಾಲ್ ಡಿಪಾಸಿಟ್ಟ್ ಎಂದು ಹೇಳುತ್ತಾರೆ ಅದರಲ್ಲಿ ಕೋಟಿಗಟ್ಟಲೆ ರೂಪಾಯಿಗಳನ್ನು ಇಟ್ಟಿದ್ದರು, ಅದು ಯಾವ ಯಾವ

(ಶ್ರೀ ಎಸ್. ಗೋಪಾಲ ಗೌಡ)

ಬ್ಯಾಂಕುಗಳಲ್ಲಿ ಇಟ್ಟಿದೆ ಮತ್ತು ಹಾಗೆ ಇಟ್ಟಿರತಕ್ಕ ಬ್ಯಾಂಕುಗಳಲ್ಲಿ ಈ ಬೋರ್ಡಿನಲ್ಲಿರುವ ಡೈರೆಕ್ಟರು ಗಳು ಆಸಕ್ತಿಯನ್ನು ಹೊಂದಿದ್ದರು ಎನ್ನುವ ಪ್ರಶ್ನೆ ಇಲ್ಲಿ ಬಂದಾಗ ಸ್ವಲ್ಪ ಮಟ್ಟಿನ ವಿವರಣೆಗಳನ್ನು ನರಕಾರದವರು ಕೊಡುತ್ತಿದ್ದರು.

ಪೂರ್ತಿಯಾಗಿ ವಿವರಣೆ ಇಲ್ಲ. ಒಬ್ಬರು ಕೈಗಾರಿಕೋದ್ಯಮಿಗಳನ್ನು ತಾತ್ಕಾಲಿಕವಾಗಿ ಅಧ್ಯಕ್ಷರ ನ್ನಾಗಿ ಮಾಡಿದ್ದಾರೆ ಎಂದು ನಾವು ಕೇಳಿದ್ದೇವೆ. ಇದಕ್ಕೆ ಏನಾದರೂ ನೀತಿ ನಿಯಮಗಳನ್ನು ಸರ್ಕಾರದವರು ಅನುಸರಿಸುತ್ತಿದಾರೆಯೇ ಎನ್ನುವುದು ಒಂದು ಪ್ರಶ್ನೆ, ಅದನ್ನು ಇವೊತ್ತು ಈ ಸಭೆಗೆ ಸ್ಪಷ್ಟವಾಗಿ ತಿಳಿಸಬೇಕು. ಕಾರಣ ಏನಂದರೆ, ಈ ಒಂದು ಬೋರ್ಡನ್ನು ರಚನೆ ಮಾಡಿದ್ದೀರಿ. ಅದಕ್ಕೆ ಒಂದು ಪ್ರತ್ಯೇಕ ಅಧಿಕಾರಿಯನ್ನು ನೇಮಕ ಮಾಡಿದ್ದೀರಿ. ಅವರು ತಮ್ಮ ಕರ್ತವ್ಯಗಳ ಬಗ್ಗೆ ಹಣ ಖರ್ಚು ಮಾಡುವುದರ ಬಗ್ಗೆ ಒಂದು ವರದಿಯನ್ನು ಸಭೆಯ ಮುಂದೆ ಇಡುತ್ತಾರೆ. ನಾವು ಚರ್ಚೆ ಮಾಡಬೇಕೆಂದು ಅಪೇಕ್ಷೆ ಮಾಡಿದ್ದೇವೆ. ಚರ್ಚೆ ಮಾಡುವುದಕ್ಕೆ ಕಾರಾವಕಾಶ ಇಲ್ಲದೆ ಆಗಲಿಲ್ಲ. ಮುಂದೆ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರೆಂದು ತಿಳಿದುಕೊಂಡಿದ್ದೇನೆ. ನಾವು ಕೊಡುತ್ತಾ ಇರತಕ್ಕಂಥ ಹಣದ ಬಗ್ಗೆ 17ನೇ ಪೇಜಿನಲ್ಲಿ ಐಟಂ ನಂ. 3 ರಲ್ಲಿ ಹೀಗೆ ಹೇಳಿದ್ದಾರೆ :

> "A Supplementary Grant for Rs.4.00 Crores was obtained in the Supplementary Estimates (Third Instalment) for 1966–67 for payment of loan to the Mysore State Electricity Board in order to assist the Board to Finance its capital programme on the understanding that the Board credited Rs. 8 crores to Government, being the cost of power sold. It was indicated by the Board that Rs. 749 lakhs was already credited and the balance of Rs. 51 lakhs would be credited before the end of March 1967."

ಆಮೇಲೆ ಸರ್ಕಾರದವರು 5 ಕೋಟಿ 50 ಲಕ್ಷ ರೂಪಾಯಿ ಕೊಟ್ಟರು, 4 ಕೋಟಿ ರೂಪಾಯಿ ಸಪ್ಲಿಮೆಂಟರಿ ಗ್ರ್ಯಾಂಟ್‌ನಲ್ಲಿ ತೆಗೆದುಕೊಂಡಿದ್ದಾರೆ ಎಂದು ವಿವರಗಳನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳು ಈಚೆಗೆ ಹೇಳಿದ್ದಾರೆ ಅದನ್ನು ಬಡ್ಡಿ ಸಮೇತ ನೀವು ಇನ್ ಸ್ಟಾಲ್‌ಮೆಂಟ್‌ನಲ್ಲಿ ಕೊಡಬೇಕು ಎಂದು. ನಾವು ಈವೊತ್ತು ಕೇಂದ್ರದಿಂದ ಸಾಲ ತಂದು ಬೇರೆಯವ ರಿಗೆ ಸಾಲಗಳನ್ನು ಕೊಡುತ್ತಿದ್ದೇವೆ. ಅಂತಹ ಸಂಸ್ಥೆಗಳಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್ ಒಂದು. ಈ ಮಾನ್ಯ ಸಭೆಯಲ್ಲಿ ಕಳೆದ ಒಂದು ತಿಂಗಳ ಕಾಲದಲ್ಲಿ ಇದರ ಕೆಲಸ ಕಾರ್ಯಗಳ ಬಗ್ಗೆ ಬೇಡಿಕೆಗಳು ಬಂದಾಗ ಅನೇಕ ಪ್ರಶ್ನೆಗಳನ್ನು ಸರ್ಕಾರಕ್ಕೆ ಕೇಳಿ ಉತ್ತರ ಪಡೆದಿದ್ದೇವೆ. ಸಣ್ಣ ನೀರಾವರಿ ಮಂತ್ರಿಗಳು ನಮಗೆ ಯಾವ ಅಭಾವ ಇಲ್ಲ, ನಾವು ಬಾವಿ ಕೊಡುತ್ತೇವೆ, ಅವರು ಬೈನ್ ಎಳೆಯುತ್ತಾರೆ, ಪವರ್ ಇದೆ ಕೊಡುತ್ತೇವೆ ಎಂದು ಹೇಳಿದರು, ವಸ್ತುತಃ ಮಾತ್ರ ತದ್ವಿರುದ್ಧವಾಗಿ ಇದೆ. ಬಾವಿ ತೋಡಿ ಎಲ್ಲಾ ಆದರೂ ಕೂಡ ನೀವು ಹೇಳಿದ ಪ್ರಕಾರ ವಿದ್ಯುಚ್ಛಕ್ತಿ ಗಿಟ್ಟುವುದಿಲ್ಲ. ಡೀಸೆಲ್ ಪಂಪುಸೆಟ್ಟು ತೆಗೆದುಕೊಳ್ಳಿ ಎಂದು ಹೇಳಿ ಡೀಸಲ್ ಪಂಪುಸೆಟ್ಟು ಹಾಕಿರತಕ್ಕ ನೂರಾರು ನಿದರ್ಶನ ಗಳೂ ಇವೆ. ಒಂದು ಕಡೆಯಲ್ಲಿ ಪಂಪುಸೆಟ್ಟಿಗೆ ಬಹಳ ಸುಲಭವಾಗಿ ಪವರನ್ನು ಕೊಡುತ್ತಿದ್ದೇವೆ, ವಿದ್ಯುಚ್ಛಕ್ತಿ ಮುಂಡಲಿ ಎಲ್ಲಾ ಕೆಲಸವನ್ನೂ ಮಾಡುತ್ತಿದೆ, ಉತ್ಸುಕತೆಯಿಂದ ಕೆಲಸ ಮಾಡುತ್ತಿದೆ ಎಂದು ಕೆಲವು ಅಂಕಿಅಂಶಗಳನ್ನು ಮಾನ್ಯ ಸಭೆಗೆ ಕೊಟ್ಟಿದ್ದೀರಿ. ಆದರೆ ವಾಸ್ತವವಾಗಿ ಆ ಕೆಲಸದಲ್ಲಿ ನನಗೆ ವೈಯುಕ್ತಿಕವಾದ ಕೆಲವು ಅನುಭವಗಳು ಇವೆ. ಕೆಲವರು ಪಂಪುಸೆಟ್ಟುಗಳನ್ನು ಕೊಂಡು, ಸಾಲಕ್ಕೆ ಸಿಕ್ಕಿಹಾಕಿಕೊಂಡು ತೊಂದರೆಗೆ ಈಡಾಗಬೇಕಾದ ಸಂದರ್ಭಗಳು ಬಂದವು. ಹೀಗೆ ಒಂದು ಕಡೆ ಇನ್ನೊಂದು ಕಡೆ ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳ ಖಾತೆಗೆ ಸಂಬಂಧಪಟ್ಟವರು ಹೇಳುತ್ತಾರೆ, ಇನ್ನೂ ಅನೇಕ ಸಹಸ್ರ ಹಳ್ಳಿಗಳಿಗೆ ನಾವು ದೀಪ ಕೊಡಬೇಕಾಗಿದೆ, 7–8 ವರ್ಷದಿಂದ ಎಸ್ಟಿಮೇಟ್ ಆದವು ಉಳಿದಿವೆ ಎಂದು. ಮಂಜೂರಾದಂಥಾದ್ದು ಈವೊತ್ತು ಕೊಡುವುದಕ್ಕೆ ಸಾಧ್ಯ ಇಲ್ಲ. ಕಾರಣ ಏನಂದರೆ ಪೋಲುಗಳು ಇಲ್ಲ, ವೈರ್‌ಗಳು ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ ಇತ್ಯಾದಿ ಕೊರತೆಗಳನ್ನು ಹೇಳುತ್ತಿದ್ದಾರೆ. ಇದು ಹಂಚುವಿಕೆಗೆ ಸಂಬಂಧಪಟ್ಟ ಬೋರ್ಡಿನ ಕೆಲಸಕಾರ್ಯಗಳು.

ಇನ್ನು ಇದರಲ್ಲಿನ ಕೆಲಸಗಾರರ ವಿಷಯ ಎಂದರೆ, ಅವರ ಬೇಡಿಕೆಗಳ ವಿಷಯ; ಬಹಳ ಕಾಲ ದಿಂದ ಪೆಂಡಿಂಗ್ ಇದೆ. ಅದು ಇದರಲ್ಲಿ ಬರುವುದಿಲ್ಲ ಎಂದು ಹೇಳುತ್ತಾರೆ. ಆದರೆ ಬೋರ್ಡಿನ

ವಿಷಯದಲ್ಲಿ ಅಧ್ಯಕ್ಷರನ್ನು ನೇಮಕ ಮಾಡುವುದರಿಂದ ಆರಂಭ ಮಾಡಿಕೊಂಡು ಅದರ ಎಲ್ಲಾ ಕೆಲಸ ಕಾರ್ಯಗಳೂ ಸುಗುಮವಾಗಿ, ಕ್ರಮ ಬದ್ಧವಾಗಿ ನೀವು ಮೂಡಿರತಕ್ಕ ಕಾನೂನು ಪ್ರಕಾರ ನಡೆಯುತ್ತಾ ಇದೆಯೇ ? ಕೋಟ್ಯಾನು ಕೋಟಿ ರೂಪಾಯಿಗಳ ಬಂಡವಾಳವನ್ನು ಮತ್ತು ಆಸ್ತಿಯನ್ನು ಬೋರ್ಡಿಗೆ ಒಪ್ಪಿಸಿದ್ದೀರಿ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಉಪಯೋಗ ಆಗುತ್ತಾ ಇದೆಯೇ ಎಂದು ಸರ್ಕಾರದವರು ಮಾನ್ಯ ನಭೆಗೆ ತಿಳಿಸಬೇಕು.

ಇನ್ನೊಂದು ಅಂಶ ಹೇಳಬೇಕು ಎಂದರೆ ಕೇಂದ್ರದಲ್ಲಿ ಕುಳಿತಿರತಕ್ಕವರು ಸರ್ವಜ್ಞರಲ್ಲ. ಕೇಂದ್ರದಲ್ಲಿರತಕ್ಕ ಸರ್ಕಾರ ಕುಬೇರ ಸರ್ಕಾರವಲ್ಲ. ಆ ಕುಬೇರ ಮತ್ತೊಬ್ಬ ಕುಬೇರನ ಹತ್ತಿರ ಸಾಲಬೇಡುವ ಸ್ಥಿತಿ ಗೊತ್ತಿದೆ. ಕೇಂದ್ರದವರು 5 ಸ್ಟಾರ್ ಹೊಟೇಲನ್ನು ಕಟ್ಟುತ್ತಾರೆ, ಅದು ಕೇಂದ್ರದ ದುಡ್ಡು, ನಿಮಗೆ ಏನು ಗೊತ್ತಿದೆ ಎಂದು ಕೇಳಿದರು. ಕೇಂದ್ರದ ದುಡ್ಡು ಎಂದರೆ ಖರ್ಚು ಮಾಡುವುದು ಎಂದೇ! ಬಹುಶಃ ಜನತಾ ಬಜಾರ್, ಸೂಪರ್ ಬಜಾರ್—ಈ ಬಜಾರುಗಳನ್ನು ಮಾಯಾಬಜಾರ್ ಎಂದು ಕರೆಯುತ್ತೇವೆ. ಅವುಗಳನ್ನು ರಚಿಸಬೇಕೆಂದು ಕೇಂದ್ರದವರು ತೀರ್ಮಾನ ತೆಗೆದುಕೊಂಡಿದ್ದಾರೆ, ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿ ಕೊಟ್ಟು 19 ಲಕ್ಷ ರೂಪಾಯಿ ಖರ್ಚುಮಾಡಿ ಬೆಂಗಳೂರಿನಲ್ಲಿ ಜನತಾ ಬಜಾರನ್ನು ತೆಗೆದಿದ್ದಾರೆ. ಶಿವಮೊಗ್ಗದಲ್ಲೂ ಒಂದು ಇದೆ, ಅದು ಚೆನ್ನಾಗಿ ನಡೆಯುತ್ತಾ ಇದೆ ಎಂದು ಕೇಳಿದ್ದೇನೆ. ಹುಬ್ಬಳ್ಳಿ ಸ್ನೇಹಿತರು ಹೇಳಿದರು, ಅಲ್ಲಿ ಜನತಾ ಬಜಾರು ನಡೆಯುತ್ತಾ ಇದೆ ಎಂದು. ಅದರ ಕಾರ್ಯವ್ಯಾಪ್ತಿಯಲ್ಲಿ ನಡೆಯುತ್ತಿರುವ ಬೇರೆ ಸೊಸೈಟಿಗಳನ್ನು ನೋಡಿದರೆ ಜಿಂಕ್‌ಷೀಟ್ ತಿನ್ನುವುದಕ್ಕೆ, ಕಡಲೇಬೇಳೆ ತಿನ್ನುವುದಕ್ಕೆ ಇನ್ನೂ ಶುರು ಮಾಡದೇ ಇರಬಹುದು. ಅದು ಬೇರೆ ವಿಷಯ. ಇದು ಕೇಂದ್ರದಿಂದ ಬಂತು ಎಂದು ಹೇಳಿ ನಮಗೆ ಸಮಾಧಾನ ಕೊಟ್ಟರೆ ಅದರಿಂದ ಸಮಾಧಾನವಾಗುವುದಿಲ್ಲ. ಕೇಂದ್ರದವರ ಎಷ್ಟೋ ಯೋಜನೆಗಳು ಈವೊತ್ತು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದೂ ಗೊತ್ತಾಗಿದೆ. ಕೆಲವು ಸಿಬ್ಬಂದಿಗೆ 80 ಪರ್ಸೆಂಟು ಖರ್ಚುಮಾಡಿ ಕಾಮಗಾರಿಗಳ ಮೇಲೆ 20 ಪರ್ಸೆಂಟು ಹಣ ಖರ್ಚು ಮಾಡಿರತಕ್ಕ ಕಾಮಗಾರಿಗಳು ಇವೆ. ಈ ಜನತಾ ಬಜಾರ್ ಮತ್ತು ಸೂಪರ್ ಬಜಾರ್ ವಿಷಯದಲ್ಲಿ ಮಾನ್ಯ ಅಧ್ಯಕ್ಷರು ತಮ್ಮ ಅಭಿಪ್ರಾಯ ಹೇಳುವುದಿಲ್ಲ.

ಅಧ್ಯಕ್ಷರು.—ದಯವಿಟ್ಟು ನೆನಪಿನಲ್ಲಿಟ್ಟುಕೊಳ್ಳಬೇಕು. ಅಧ್ಯಕ್ಷರಾದವರು ಇದರ ವಿಷಯದಲ್ಲಿ ಸಮರ್ಥಿಸುವುದಕ್ಕೂ ವಿರೋಧಿಸುವುದಕ್ಕೂ ಆಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಒಬ್ಬರು ಅಧ್ಯಕ್ಷರು ಹಾಗೆ ಭಾಷಣ ಮಾಡಿದ್ದಾರೆ. ತಮ್ಮ ಅಭಿಪ್ರಾಯ ಹೇಳಬಹುದು.

3-00 P.M.

ಇದರ ಮೂಲೋದ್ದೇಶವೇನೆಂದರೆ, ಈಗ ಏರುತ್ತಿರುವ ಬೆಲೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು ; To hold the price line ಎಂಬುದು. ಮಾನ್ಯ ಶ್ರೀ ನಾಡಗೌಡರು ಇನ್ನು ಮುಂದೆ ಈ ಬೆಲೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಬಗ್ಗೆ ವಿಚಾರಮಾಡಬೇಕು. ಹಾಗಾದರೆ ಅವಶ್ಯಕವಸ್ತುಗಳು, ಎಸೆನ್‌ಷಿಯಲ್ things ಎಂದರೇನು ? ಎಸೆನ್‌ಷಿಯಲ್ ಕಮೊಡಿಟೀಸ್ ಅಂದರೆ ಅಕ್ಕಿ, ಗೋಧಿ, ರಾಗಿ ಇವೆಲ್ಲವನ್ನೂ ಸೇರಿಸಬೇಕಾಗಿತ್ತು. ಏಕೆಂದರೆ ಜನಜೀವನದ ಅವಶ್ಯಕ ವಸ್ತುಗಳನ್ನು ತಜ್ಞರು ಪಟ್ಟಿಮಾಡಿದ್ದಾರೆ. ಜೀವನದಲ್ಲಿ ನಿತ್ಯದ ಬಳಕೆಯ ವಸ್ತುಗಳು ಜನಸಾಮಾನ್ಯರಿಗೆ ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತದೆ. ಉದಾಹರಣೆಗಾಗಿ ಸೋಪನ್ನು ತೆಗೆದುಕೊಳ್ಳೋಣ : ಅದು ಜೀವನಕ್ಕೆ ಅವಶ್ಯಕವಾದ ವಸ್ತು, ಸಾಬೂನು ಎನ್ನತಕ್ಕದ್ದನ್ನು ಜೀವನದ ಅವಶ್ಯಕ ವಸ್ತುಗಳಲ್ಲಿ ಸೇರಿಸಬಹುದು. ಅವನ್ನು ಎಷ್ಟೋ ಸಂಖ್ಯಾ ವರ್ಗ ಉಪಯೋಗಿಸುತ್ತಾ ಇಲ್ಲ. ಏಕೆಂದರೆ ಬೆಲೆ ಜಾಸ್ತಿ. ಅನೇಕ ಗ್ರಾಮಗಳಲ್ಲಿ ಬಚ್ಚೆಯ ಸಾಬೂನನ್ನೇ ಮೈಗೆ ಹಚ್ಚಿಕೊಳ್ಳುವುದೂ ಉಂಟು. ಏಕೆಂದರೆ, ಮೈಗೆ ಹಾಕಿಕೊಳ್ಳುವ ಸೋಪಿನಬೆಲೆ ವಿಪರೀತ ಏರಿದೆ. ಈ ರೀತಿಯಾಗಿ ಜೀವನಕ್ಕೆ ಅವಶ್ಯಕವಾದವಸ್ತುಗಳನ್ನು ಹೆಚ್ಚಿನ ಬೆಲೆಗೆ ಮಾರುತ್ತಿರುವುದರಿಂದ ಬಡವರಿಗೆ ತೊಂದರೆ ಹೆಚ್ಚು. ಅದನ್ನು ಎಷ್ಟು ಪ್ರಮಾಣದಲ್ಲಿ ಮಾತಬೇಕೆಂಬ ಬಗ್ಗೆ ನಿರ್ಧಾರವಿಲ್ಲ. ಏಕೆಂದರೆ ಹರಿಹರ, ಧಾರವಾಡ, ಹುಬ್ಬಳ್ಳಿ ಮುಂತಾದ ಪ್ರದೇಶಗಳಲ್ಲಿ ಜನಗಳ ನಿತ್ಯ ಜೀವನದ ಪದಾರ್ಥಗಳನ್ನು ನಿರೀಕ್ಷಿಸುವಷ್ಟು ಪ್ರಮಾಣದಲ್ಲಿ ಒದಗಿಸಲು ಅಲ್ಲಿನ ಜನತಾಬಜಾರ್ ಸಿದ್ಧವಾಗಿಲ್ಲ. ನಿತ್ಯ ಜೀವನದ ಪದಾರ್ಥಗಳ ಬೆಲೆ ಏರುತ್ತಿರುವುದನ್ನು ಒಂದು ಹಿಡಿತದಲ್ಲಿಡುವುದಕ್ಕೆ ಇವರಿಗೆ ಸಾಧ್ಯವಾಗಿಲ್ಲ. ಆ ಪ್ರದೇಶಗಳ ಜನರಿಗೆ ಒಂದು ವಾರಕ್ಕೆ ಬೇಕಾದಂಥ ಜೋಳ, ಅಕ್ಕಿಯನ್ನು ಒದಗಿಸುವ ಪ್ರಮಾಣದಲ್ಲಿ ಇವರಲ್ಲಿದೆಯೇ ಎಂದು ನಾನು ಕೇಳುತ್ತೇನೆ. ನಿತ್ಯ ಜೀವನ ವಸ್ತುಗಳ ದರ ಏರಿರುವ ಬೆಲೆಯನ್ನು

(ಶ್ರೀ ಎನ್. ಗೋಪಾಲಗೌಡ)

ಯಾವರೀತಿ ಕಂಟ್ರೋಲ್ ಮಾಡಬೇಕೆಂಬುದು ಮುಖ್ಯ. ಪ್ರಾಯೋಗಿಕವಾಗಿ ಕೇಂದ್ರ ಸರ್ಕಾರದ ಪಾಲು ನಮಗೆ ಬರುವುದು ಇರಲಿ ಇನ್ನು ಅಮೇರಿಕಾದ ಕೆಲವು ಸಾಮಾನುಗಳನ್ನು ಇಲ್ಲಿಗೆ ತರಿಸಿ ಮಾರಾಟ ಮಾಡುವುದರಿಂದ ಏನೂ ತಪ್ಪು ಇಲ್ಲ. ಆದರೆ ಇದರಿಂದ ಮೂಲೇದ್ದೇಶವೇನೂ ಸಾರ್ಥಕವಾಗುವುದಿಲ್ಲ. ವೃಥಾ ಅಪಾರ ಹಣ ಸಿಬ್ಬಂದಿಗೆ ಖರ್ಚಾಗುತ್ತಿದೆ. ಇದರಲ್ಲಿ ನಿತ್ಯ ಅವಶ್ಯಕವಾದ ವಸ್ತುಗಳನ್ನು ಸರ್ಕಾರದವರು ಎಲ್ಲಿಂದ ತರುತ್ತಿದ್ದಾರೆಂದು ಬಗ್ಗೆ ನನಗೆ ಇನ್ನೂ ಅನುಮಾನವಿದೆ. ಹಿಂದಿನಿಂದಲೂ ಇವರು ಗೊತ್ತಾದ ಕೆಲವು ಕಂಪನಿಗಳು ತಯಾರುಮಾಡತಕ್ಕ ಕೆಲವು ವಸ್ತುಗಳನ್ನು ಆ ಕಂಪೆನಿಗಳು ಗೊತ್ತುಮಾಡಿದಂಥ ದರಗಳಲ್ಲಿ ಇವರು ಮಾರುತ್ತಿರುವುದರಿಂದ ಬಳಕೆದಾರರಿಗೆ ಮಾಡಿರುವ ಉಪಕಾರವೇನು ? ಸಾಮಾನ್ಯವಾಗಿ ಅಮೂರ್ ಡಬ್ಬಿಗಳನ್ನು ಸಹ ಅಂಗಡಿಗಳಲ್ಲಿ ಮುಚ್ಚಿಟ್ಟು ಅದರ ಬೆಲೆಯ ಮೇಲೆ 2-3 ರೂಪಾಯಿಗಳನ್ನು ಜಾಸ್ತಿಯಾಗಿ ಮಾಡಿ ಬ್ಲಾಕ್‌ನಲ್ಲಿ ಮಾರುತ್ತಿದ್ದಾರೆ. ನಮ್ಮ ಜನತಾ ಬಜಾರಿನಲ್ಲಿದ್ದರೆ ಅವುಗಳ ಬೆಲೆ ಏರಿಸುವುದಿಲ್ಲವೆಂದು ಹೇಳಿ ಜನಗಳಿಗೆ ವಿಕ್ರಯಿಸುತ್ತಿದ್ದಾರೆ. ಆದರೆ ಅವುಗಳ ಬೆಲೆ ಏರುತ್ತಿದೆಯೋ ಇಲ್ಲವೋ ಎಂಬುದನ್ನು ನಾವು ನೋಡಬೇಕಾಗಿದೆ. ಏಕೆಂದರೆ ಇಂಡಿಯಾ ಸರ್ಕಾರದವರು ಇಟ್ಟಿರತಕ್ಕ ಜನತಾ ಬಜಾರ್‌ಗೆ ಹೋಗಿ ತೆಗೆದುಕೊಳ್ಳಿ, ಅಮೂರ್ ನಮ್ಮಲ್ಲಿ ಸಿಗುವುದಿಲ್ಲವೆಂದು ಅನೇಕ ಅಂಗಡಿಗಳಲ್ಲಿ ಹೇಳುತ್ತಾರೆ. ಹೀಗೆ ಕೆಲವು ಸಂಗತಿಗಳನ್ನು ಜನತಾಬಜಾರ್ ಅವರೇ ಸೃಷ್ಟಿ ಮಾಡುತ್ತಿದ್ದಾರೆಯೋ ಹೊರ್ತು ಮತ್ತೇನೂ ಇಲ್ಲ. ಇದರಿಂದ ಜನತಾ ಬಜಾರಿನಲ್ಲಿಯೂ ಜೀವನವ ಅವಶ್ಯಕ ವಸ್ತುಗಳನ್ನು ಮಾರಲು ಅವಕಾಶವನ್ನು ಕೊಡುವುದಕ್ಕಾಗಲೀ ಸಾಧ್ಯವಾಗಿಲ್ಲ ಮತ್ತು ಅಲ್ಲಿ ಒಂದು ಬೆಲೆಗಳ ನಿಯಂತ್ರಣವನ್ನು ಮಾಡುವುದಕ್ಕೂ ಸಾಧ್ಯವಾಗಿಲ್ಲ. ಆದ್ದರಿಂದ ಶ್ರೀಮಾನ್ ನಾಡಗೌಡರನ್ನು ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರ ಉತ್ಸಾಹ ಕೇವಲ ಉತ್ಸಾಹದಲ್ಲಿಯೇ ಪರ್ಯವಸಾನ ಆಗದೇ ಇರಲಿ ಎಂದು. ಅವರು ತಮ್ಮ ಮನೆಯವರು ಜನತಾ ಬಜಾರಿಗೆ ಹೋಗಿದ್ದರು ಎಂದು ಹೇಳಿದರು. ಮನೆಯವರು ಅಲ್ಲಿಗೆ ಹೋಗುವುದು ಬೇಡ, ಮಂತ್ರಿಗಳೇ ಹೋಗಿ ಅಲ್ಲಿ ನೋಡಬೇಕು. ಆಗ ಎಷ್ಟು ಸಾಮಾನುಗಳು ಎಷ್ಟು ಕಂಪೆನಿಗಳವರದು ಇದೆಯೆಂಬುದು ಗೊತ್ತಾಗುತ್ತದೆ. ಕಂಪೆನಿಗಳವರೇ ಕೆಲವು ಪದಾರ್ಥಗಳಿಗೆ ಔಟ್‌ರೈಟ್ ಕಮಿಷನ್ ಎಂದು ಕೊಡುತ್ತಾರೆ. ಇವರು ಮಾಡಿರತಕ್ಕ ಜನತಾ ಬಜಾರಿಗೆ ಕೆಲವು ಪದಾರ್ಥಗಳನ್ನು ಅಲ್ಲಿ ಮಾರುವಾಗ ಅವರು ಅವಕ್ಕೆ ಕೊಡತಕ್ಕೆ ಕಮಿಷನ್ ಯಾವ ಅಕೌಂಟಿಗೆ ಹಾಕಿದ್ದಾರೆ, ಅದನ್ನು ಇಲ್ಲಿ ಸೇರಿಸುತ್ತಾರೋ ಅಥವಾ ಕಂಪೆನಿಗೆ ಮಾಫಿ ಮಾಡುತ್ತಾರೋ ಎಂಬುದನ್ನು ನೋಡಬೇಕು. ಮಾರಾಟ ತೆರಿಗೆ ಕೊಡುತ್ತಿದ್ದಾರೆಯೆ ಎಂಬುದನ್ನು ಸಹ ನೋಡಬೇಕು. ಇದರಿಂದ ಜನತಾ ಬಜಾರಿನ ಕಷ್ಟವೇನೆಂದರೆ ಕೇವಲ ಐದಾರು ಸಾವಿರ ರೂಪಾಯಿಗಳಷ್ಟು ರಾಭ ಬಾರದೇ ಇದು ನಡೆಯುತ್ತಿದೆ. ಇಷ್ಟು ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನು ಅದರಮೇಲೆ ಹಾಕುವುದಕ್ಕೆ ಯಾವ ಪ್ರಮಾಣದಲ್ಲಿ ಇವರು ಬಡ್ಡಿ ಕೇಳಿದ್ದಾರೋ ಗೊತ್ತಿಲ್ಲ. ಇದರಿಂದ ಪ್ರಜೆಗಳಿಗೆ ಯಾವರೀತಿ ಉಪಕಾರವಾಗುತ್ತಿದೆ. ರಾಭ ಪಡೆಯುವುದಕ್ಕೆ ಬದಲು ಲುಕ್ಸಾನು ಆಗಿದೆ ಎಂದು ಹೇಳಿದರೆ ಏನೂ ತಪ್ಪಾಗಲಾರದು. ಶ್ರೀ ನಾಗನ ಗೌಡರು ಮಾತನಾಡುತ್ತಾ, ಇದರಿಂದ ರಾಭ ಬರಬೇಕು ಜನತೆಗೆ ಸದುಪಯೋಗವಾಗಬೇಕು ಎಂದು ಹೇಳಿದರು. ದಿನ ಬಳಕೆಯ ವಸ್ತುಗಳ ದರ ದಿನೇ ದಿನೇ ಏರುತ್ತಿರುವಾಗ ಆ ವಸ್ತುಗಳನ್ನು ಜನತಾ ಬಜಾರಿನಲ್ಲಿ ಹೇಗೆ ಮಾರಬೇಕೆಂಬುದನ್ನು ಯೋಚನೆಮಾಡಬೇಕು. ಏಷಿಯಾಟಿಕ್ ಬಿಲ್ಡಿಂಗ್ ಬಾಡಿಗೆಯಾದರೂ ಗಿಟ್ಟಿಬೇಕು. ಅಲ್ಲಿನ ಸಿಬ್ಬಂದಿ ಖರ್ಚು ಕಡಿಮೆಯಾಗಬೇಕು. ನಮ್ಮ ರಾಜ್ಯದ ದುಡ್ಡಿಗೆ ಬಡ್ಡಿಗಿಟ್ಟಿ, ಒಂದು, ಎರಡು, ನಾಲ್ಕಾಣೆ ರಾಭ ಬರುವ ದೃಷ್ಟಿಯಲ್ಲಿ ಜನತಾ ಬಜಾರನ್ನು ನಡೆಸದೆ ಹೋದರೆ ದೇಶದ ಹಣ ನಷ್ಟವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದ ನೀತಿಯನ್ನು ತಿದ್ದಿಕೊಳ್ಳಬೇಕು. ಕೇಂದ್ರದಲ್ಲಿ ಈ ಬಗೆ ಪ್ರತಿಭಟನೆ ಮಾಡವಿದ್ದರೆ, ಅವರಿಗೆ ಈ ವಿಚಾರಗಳನ್ನು ಕೂಲಂಕುಷವಾಗಿ ತಿಳಿಸಿವೇ ಇದ್ದರೆ ಖಂಡಿತವಾಗಿ ಈ ಸರ್ಕಾರಕ್ಕೆ ನಷ್ಟವಾಗುತ್ತದೆಂದು ಹೇಳಿ ನಾನು ಈ ಮನೂದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಅಧ್ಯಕ್ಷರೇ, ಈಗ ಸ್ಟೇಟ್ ಮಾರ್ಕೆಟಿಂಗ್ ಕೊ-ಆಪರೇಟಿವ್ ಸೊಸೈಟಿಗೆ ಕೆಲವು ಹಣವನ್ನು ಕೂಡತಕ್ಕ ಬಾಬುಗಳು ಈ ಅಪ್ರೋಪ್ರಿಯೇಷನ್ ಮನೂದೆಯಲ್ಲಿವೆ. ಅವರಿಗೆ ಕೊಡುವ ಉದ್ದೇಶವೇನೆಂದರೆ, ಬೆಳೆಗಳಿಗೆ ರೋಗ ಬೀಳದ ಹಾಗೆ ಅದಕ್ಕೆ ಬೇಕಾದಂಥ ಔಷಧಿಗಳನ್ನು ಕೊಂಡು ಅವನ್ನು ಅಲ್ಲಿ ಶೇಖರಿಸಿ ರೈತರಿಗೆ ಸಕಾಲದಲ್ಲಿ ಒದಗಿಸಬೇಕೆಂಬುದು, ಈಗಾಗಲೇ ಸ್ಟೇಟ್ ಮಾರ್ಕೆಟಿಂಗ್ ಕೊ-ಆಪರೇಟಿವ್ ಸೊಸೈಟಿಯವರು ಕೈಗೊಂಡಿರುವ ಕಾರ್ಯಕ್ರಮಗಳಲ್ಲಿ ಬೀಜದ ಅಲೂಗಡ್ಡೆಗಳನ್ನು ರೈತರಿಗೆ ಒದಗಿಸುತ್ತಿದ್ದಾರೆ. ಇನ್ನೂ ಗೊಬ್ಬರಗಳನ್ನು ತೆಗೆದುಕೊಂಡು ಬಂದು ರೈತರಿಗೆ ಸಕಾಲದಲ್ಲಿ ಒದಗಿಸುವಂಥಾದ್ದನ್ನು

ಕೈಗೊಂಡಿದ್ದಾರೆ. ಅದರೆ ಇದರಲ್ಲಿ ಪ್ರತಿವರ್ಷವು ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಅದರೆ ಈ ಬೀಜದ ಆಲೂಗಡ್ಡೆಗಳನ್ನು ತರುವಾಗ ಯಾರ್ಯಾರಿಗೆ ತಲಪುತ್ತದೆ, ನಿಜವಾಗಿ ರೈತರಿಗೆ ಸಕಾಲಕ್ಕೆ ತಲುಪುತ್ತದೆಯೇ ಎಂಬ ಬಗ್ಗೆ ಲೆಕ್ಕಗಳನ್ನು ತೆಗೆದುಕೊಂಡರೆ ರೈತರಿಗೆ ಅನುಕೂಲಕ್ಕಿಂತ ಅನಾನುಕೂಲಗಳೇ ಜಾಸ್ತಿಯಾಗಿವೆ. ಇಂತಹ ಕೆಲಸಗಳನ್ನು ಮಾಡುವುದನ್ನೇನಾದರೂ ಸೆಂಟ್ರಲ್ ಕೋ-ಆಪರೇಟಿವ್ ಸೊಸೈಟಿಗೆ ಕೊಟ್ಟರೆ ಅಲ್ಲಿಯೂ ಸರಿಯಾಗಿ ಕೆಲಸವಾಗುವುದಿಲ್ಲ. ಇನ್ನು ಔಷಧಿ ಗಳೂ ಸಹ ರೈತರಿಗೆ ಸಕಾಲದಲ್ಲಿ ದೊರೆಯುತ್ತಾ ಇಲ್ಲ. ಅವರಿಗೆ ಆ ಯೋಜನೆಯೇ ಕೈತಪ್ಪಿ ಹೋಗುತ್ತದೆ. ಆದ್ದರಿಂದ ಸ್ಪೇಟ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಈ ವ್ಯವಹಾರ ಮಾಡುವುದನ್ನು ತಪ್ಪಿಸುವುದು ಅತ್ಯಾವಶ್ಯಕವೆಂದು ನಾನು ವಿನಯದಿಂದ ಮಂತ್ರಿಗಳಿಗೆ ಸಲಹೆಮಾಡುತ್ತೇನೆ. ಔಷಧಿ ವಗೈರಿಗಳನ್ನು ಶೇಖರಿಸಬೇಕಾದರೆ, ಆ ಕೆಲಸವನ್ನು ವ್ಯವಸಾಯ ಇರಾಖೆಗೆ ಕೊಡುವಂತೆ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದರೆ ಖಂಡಿತವಾಗಿ ರೈತರಿಗೆ ಅವೆಲ್ಲವೂ ಸಕಾಲಕ್ಕೆ ತಲಪುತ್ತವೆ. ಇಲ್ಲದಿದ್ದರೆ ಒಳ ವ್ಯಾಪಾರ ಬಹಳವಾಗಿ ನಡೆಯುತ್ತದೆ. ಆದ್ದರಿಂದ ಸರ್ಕಾರದವರು ಅವರಿಗೆ ಗ್ಯಾರಂಟಿಯನ್ನು ಕೊಡುವುದು ಖಂಡಿತ ಕೂಡದು ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. ಅದು ಮಂಡ್ಯಾ ನ್ಯಾಷನಲ್ ಪೇಪರ್ಸ್ ಕೊಡುತಕ್ಕ ಸಾಲ. ಅದೇ ಈಗ ಮುಳಗಿಹೋಗುತ್ತಿದೆ. ಅದರ ಬಂಡವಾಳ ಎಷ್ಟು, ಅಲ್ಲಿ ಕೆಲಸಮಾಡುವವರು ಎಷ್ಟರಮಟ್ಟಿಗೆ ಉತ್ಸಾಹಶಾಲಿಗಳಾಗಿದ್ದಾರೆ, ಅವರ ನಿಜವಾದ ಬಂಡವಾಳವೇನು, ಅವರಿಗೆ ನಿಜವಾಗಿ ಆ ಉದ್ಯಮ ದಲ್ಲಿ ಶ್ರದ್ಧೆ, ಉತ್ಸಾಹ ಇದೆಯೇ ಎಂಬುದನ್ನು ನೋಡಬೇಕು. ಅವರೇ ಈಗ ಅದನ್ನು ಕೈಬಿಡುತ್ತಾ ರೆಂಬುದಾಗಿ ನಾನು ಕೇಳುತ್ತಿದ್ದೇನೆ. ಅಂತಹ ಒಂದು ಸಮಯದಲ್ಲಿ ಸರ್ಕಾರದವರು ಸಾಲವನ್ನು ಆ ಮಿಲ್ಲಿಗೆ ಕೊಟ್ಟರೆ ಖಂಡಿತವಾಗಿ ನಷ್ಟವಾಗುತ್ತದೆ. ಈ ರೀತಿಯಾಗಿ ನಷ್ಟವಾಗುತ್ತಿರುವ ಉದ್ಯಮಕ್ಕೆ ಮೈಸೂರು ರಾಜ್ಯದ ಬೊಕ್ಕಸದಿಂದ ಹಣವನ್ನು ತೆಗೆದು ಅವರಿಗೆ ಕೊಟ್ಟು ನಷ್ಟಮಾಡಿಕೊಳ್ಳುವುದು ಸರಿಯಲ್ಲ. ಯಾವಾಗಲೂ ಯಾವುದೇ ಕಂಪನಿಗೆ ಈ ರೀತಿಯಾಗಿ ಸಾಲವನ್ನು ಕೊಡುವಾಗ ನಿಜವಾಗಿ ಆ ಕಂಪನಿಯ ಬಂಡವಾಳವೇನು, ಅದರ ಯೋಗ್ಯತೆ, ದಕ್ಷತೆ ನೋಡಿ ಸಾಲ ಕೊಡಬೇಕು ಇಲ್ಲದಿದ್ದರೆ ಸರ್ಕಾರದಿಂದ ಕೊಡತಕ್ಕ ಸಾಲ ಬಹಳವಾಗಿ ನಷ್ಟವಾಗುತ್ತದೆ. ಅಂತಹ ಒಂದು ಪರಿಸ್ಥಿತಿ ಈಗ ಇದೆ. ಆದ್ದರಿಂದ ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿ ಈ ಕೆಲವು ಐಟಂಗಳನ್ನು ನಾನು ವಿರೋಧಿಸುತ್ತೇನೆ.

† Sri H. R. ABDUL GAFFAR.—Sir, There is not much to speak by way of reply on the Demands placed before this hon. House. The hon. Member Mr. Siddaveerappa raised some points, which had been raised by the hon. Members Perhaps, he was not present in the House when I gave an exhaustive reply while replying to the Supplementary Budget demands. No new points have been made.

There was a suggestion that the Janatha Bazaar should be run on better lines. I have also said the other day that it is Janatha Bazaars like these which are keeping the prices under control and maintaining the price level. And I repeat the same opinion.

Another hon. Member has made some suggestions about insectisides being sold through the Agricultural Department. That is a suggestion which will be considered by the Ministry concerned.

Sri Gopala Gowda made some reference to the appointment of the new Chairman in the Electricity Board. This is not a fact. The Chairman of the Board is on leave and in his place one of the Hon. Members of the Board is placed in charge of his duties. There is no appointment of the Chairman as such.

I feel, Sir, that there is no need to reply at length because this subject has been discussed at length and replied at length. I commend the Bill for the acceptance of the House.

Mr. SPEAKER.—I have to put the Motion to consider it to the vote of the House. The question is :

"That the Mysore Appropriation (No. 3) Bill, 1967 be taken into consideration."

The motion was adopted.

CLAUSES, Etc.

Mr. SPEAKER.—There are no amendments. I will put the clauses to the House. The question is :

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—The question is :

"That the schedule stated part of the Bill."

The motion was adopted

The Schedule was added to the Bill.

Mr. SPEAKER.—The question is :

"That clause 1, the Title and the Preamble stand part of the Bill."

The motion was adopted.

Clause, The Title, and the Preamble were added to the Bill.

Motion to pass.

Sri H. R. ABDUL GAFFAR.—I beg to move :

"That the Mysore Appropriation (No. 3) Bill, 1967, be passed."

Mr. SPEAKER.—The question is :

"That the Mysore Appropriation (No. 3) Bill, 1967, be passed."

The Motion was adopted.

Mr. SPEAKER.—The House now stands adjourned for half-an-hour.

The House adjourned for Recess at Fifteen Minutes past Three of the Clock and re-assembled at Fifty-five Minutes past Three of the Clock.